**OS No.246/2016**
**PW-1**

**<u>ದಿನಾಂಕಃ 27.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ.**ಬಿ.ಎಂ.ಎನ್** ವಕೀಲರಿಂದಃ</u>

ವಾದಿಯು ನನ್ನ ತಾಯಿ. ನನ್ನ ತಾಯಿಗೆ ಈಗ 70 ವರ್ಷ ವಯಸ್ಸಾಗಿರುತ್ತವೆ. ನನ್ನ ತಾಯಿಗೆ ಒಟ್ಟು 6 ಜನ ಮಕ್ಕಳು. ನಾನು ಈ ದಾವೆ ಸಲ್ಲಿಸಬೇಕಾದರೇ ದಾವಾ-1 ನೇ ಅನುಸೂಚಿ ಸ್ವತ್ತು 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿ ಇತ್ತು. ಈಗ ಸದರಿ ದಾವಾ-1 ನೇ ಅನುಸೂಚಿ ಸ್ವತ್ತು ಸುಂದರಮ್ಮರವರ ಹೆಸರಿನಲಿ ಇರುತ್ತದೆ. ಸದರಿ ಸುಂದರಮ್ಮ ನಮ್ಮ ಗ್ರಾಮದವರಾಗಿರುತ್ತಾರೆ. ಪ್ರತಿವಾದಿಗಳು ದಾವಾ-1 ನೇ ಅನುಸೂಚಿ ಸ್ವತ್ತನ್ನು ಸುಂದರಮ್ಮರವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾವಾ-1 ನೇ ಅನುಸೂಚಿ ಸ್ವತ್ತು ಸದರಿ ಸುಂದರಮ್ಮರವರ ಸ್ವಾಧೀನತೆಯಲ್ಲಿ ಇದೆ ಎಂದರೆ ಸರಿ. ಸದರಿ ಕ್ರಯ ಪತ್ರದ ಬಗ್ಗೆ ನನ್ನ ತಕರಾರು ಇರುತ್ತದೆ. ಸದರಿ ಕ್ರಯ ಪತ್ರವನ್ನು ರದ್ದು ಕೋರಿ ನಾನು ಯಾವುದೇ ದಾವೆ ಸಲ್ಲಿಸಿರುವುದಿಲ್ಲ.

ದಾವಾ-2 ನೇ ಅನುಸೂಚಿ ಸ್ವತ್ತು ಈಗ 5 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ 5 ನೇ ಪ್ರತಿವಾದಿಯು ಸದರಿ ದಾವಾ-2 ನೇ ಅನುಸೂಚಿ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ 5 ನೇ ಪ್ರತಿವಾದಿಯವರ ಕುಟುಂಬದಲ್ಲಿ 1 ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವಾ-1 ಮತ್ತು 2 ನೇ ಅನುಸೂಚಿ ಸ್ವತ್ತುಗಳ ಖಾತೆಗಳನ್ನು ರದ್ದು ಕೋರಿ ನಾನು ದಾವೆ ಸಲ್ಲಿಸಿರುವುದಿಲ್ಲ.

ದಾವಾ-3 ನೇ ಅನುಸೂಚಿ ಸ್ವತ್ತಿನ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ-3 ನೇ ಅನುಸೂಚಿ ಸ್ವತ್ತಿನ ಖಾತೆಯು ಕರಿಬಸವೇಗೌಡರವರ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತುಗಳ ಖಾತೆಗಳು ನನ್ನ ತಾಯಿಯ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ದಾವಾ-3 ನೇ ಅನುಸೂಚಿ ಸ್ವತ್ತಿನ ಅಳತೆ 40X60 ಅಡಿ ಆಗಿರುತ್ತದೆ. ಸದರಿ ಅಳತೆ ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಚಾಪಕಾಗದ ಇದೆ ಎಂದು ನುಡಿಯುತ್ತಾರೆ.

ದಾವಾ-4 ನೇ ಅನುಸೂಚಿ ಸ್ವತ್ತಿನ ಅಳತೆ 100X40 ಅಡಿ ಆಗಿರುತ್ತದೆ. ಸದರಿ ಸ್ವತ್ತಿನ ಖಾತೆ ನಂ.43/2 ಆಗಿರುತ್ತದೆ. ಸದರಿ ದಾವಾ-4 ನೇ ಅನುಸೂಚಿ ಸ್ವತ್ತಿನ ಖಾತೆಯು ಕರಿಬಸವೇಗೌಡರವರ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ಕರಿಬಸವೇಗೌಡರವರ ಹೆಸರಿನಲ್ಲಿ ಇರುವುದಕ್ಕೆ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

ದಾವಾ ಅನುಸೂಚಿ ಸ್ವತ್ತುಗಳ ಮಾರುಕಟ್ಟೆ ಬೆಲೆ ನನಗೆ ಗೊತ್ತಿಲ್ಲ. ದಿ.14.09.2020 ರಂದು ನಾನು ಮತ್ತು ನನ್ನ ತಾಯಿ ಸೇರಿ ಶಿವಮ್ಮ, ಲಕ್ಷ್ಮೀ ಮತ್ತು ಪಿಡಿಓರವರಿಗೆ ನಮ್ಮ ವಕೀಲರ ಮೂಲಕ ನೋಟಿಸ್ ನೀಡಿದ್ದೇವೆ ಎಂದರೆ ಸರಿ. ಸಾಕ್ಷಿದಾರರು ಸದರಿ ನೋಟಿಸನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ನೋಟಿಸನ್ನು ನಿಡಿ-**1** ಎಂದು ಗುರುತಿಸಲಾಯಿತು. ವಾದಿಯವರು ಕರಿಬಸವೇಗೌಡ ಬಿನ್ ಗುಂಡಾಚಾರಿ

ಕುಳ್ಳೇಗೌಡರವರ ಸಾಕುಮಗಳು ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ. ಸದರಿ ಕರಿಬಸವೇಗೌಡರವರು ಯಾವ ವರ್ಷ ವಾದಿಯವರನ್ನು ಸಾಕುಮಗಳಾಗಿ ಸ್ವೀಕರಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿ ಎಲ್ಲಾ ವಿಚಾರಗಳು ವಾದಿಯವರಿಗೆ ಚೆನ್ನಾಗಿ ಗೊತ್ತಿರುತ್ತದೆ. ಸದರಿ ವಾದಿಯವರು ನ್ಯಾಯಾಲಯಕ್ಕೆ ಬಂದರೇ ನಿಜ ಸಂಗತಿ ತಿಳಿಯುತ್ತದೆ ಎಂದರೆ ಸರಿ . ಸಾಕ್ಷಿದಾರರು ಮುಂದುವರಿದು ವಾದಿಯವರಿಗೆ ವಯಸ್ಸಾಗಿರುವುದರಿಂದ ಸ್ವಲ್ಪ ಮರೆತು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

ನಿಲಸೊಗೆ ಗ್ರಾಮದ ಸರ್ವೇ ನಂ.172/2 ರ 2 ಎಕರೆ ವಿಸ್ತೀರ್ಣಕ್ಕೆ ನಾನು ದಾವೆ ಸಲ್ಲಿಸಿರುವುದಿಲ್ಲ. ದಾವಾ-1 ಮತ್ತು 2 ನೇ ಅನುಸೂಚಿ ಸ್ವತ್ತುಗಳ ಸ್ವಾಧೀನತೆ ಕೋರಿ ನಾನು ಯಾವುದೇ ದಾವಾ ಸಲ್ಲಿಸಿರುವುದಿಲ್ಲ. ವಾದಿಗಳು ದಾವಾ ಅನುಸೂಚಿ ಸ್ವತ್ತುಗಳು ನಮಗೆ ಬರಬೇಕು ಎಂದು ಈ ದಾವೆ ಸಲ್ಲಿಸಿರುತ್ತಾರೆ. ದಾವಾ 3 ಮತ್ತು 4 ನೇ ಅನಸೂಚಿ ಸ್ವತ್ತುಗಳು ಪ್ರತಿವಾದಿಗಳ ಸ್ವಾಧೀನತೆಯಲ್ಲಿ ಇವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳು ನಮ್ಮ ಸ್ವಾಧೀನತೆಯಲ್ಲಿ ಇವೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ದಿನಾಂಕ 24.10.1993 ರಂದು ಪುಟ್ಟಲಿಂಗಮ್ಮರವರು ಬರೆದು ಕೊಟ್ಟಿದ್ದಾರೆ ಎಂದು ಹೇಳಲಾಗುವ ದಾಖಲಾತಿಯು ನೋಂದಣಿ ಆಗಿರುವುದಿಲ್ಲ. ವಾದಿಯು ಕರಿಬಸವೇಗೌಡರವರ ಸಾಕುಮಗಳು ಅಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ.